## IN THE COURT OF THE SENIOR CIVIL JUDGE AND JMFC, SOMWARPETE

## CC No. 280/2026

ಪ್ರಕರಣವನ್ನು ಲೋಕ ಅದಾಲತ್ ನಲ್ಲಿ ಕರೆಯಲಾಯಿತು. ಆರೋಪಿ ಪರ ಕುಮಾರಿ. ಸಾನಿಯಾ ವಕೀಲರು ವಕಾಲತ್ತನ್ನು ಸಲ್ಲಿಸಿದ್ದು, ಮತ್ತು ಆರೋಪಿಗಳ ಪರವಾಗಿ ತಪ್ಪನ್ನು ಒಪ್ಪಿಕೊಳ್ಳುವುದಾಗಿ ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಕಲಂ 276 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆರೋಪಿತರ ಮೇಲೆ ಕರ್ನಾಟಕ ಪೋಲೀಸ್ ಕಾಯಿದೆ ಕಲಂ 87 ರ ಅಡಿಯಲ್ಲಿ ಆಪಾದನೆಯನ್ನು ರಚಿಸಿ ಆರೋಪಿತರ ಪರವಾಗಿ ವಕೀಲರಿಗೆ ಆಪಾದನೆಯನ್ನು ಓದಿ ಹೇಳಿ ವಿವರಿಸಲಾಯಿತು. ಆರೋಪಿತರ ಪರವಾಗಿ ಆಪಾದನೆಗಳನ್ನು ಒಪ್ಪಿಕೊಳ್ಳವುದಾಗಿ ಹೇಳಿರುವ ಮೇರೆಗೆ ಆರೋಪಿತರ ತಪ್ಪೊಪ್ಪಿಗೆಯನ್ನು ವಕೀಲರ ಮೂಲಕ ಸ್ವೀಕರಿಸುವುದು ಸೂಕ್ತವೆಂದು ತೀರ್ಮಾನಿಸಿ ಕೆಳಗಿನಂತೆ-

**ಆದೇಶ**

ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಕಲಂ 276 ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಕರ್ನಾಟಕ ಪೋಲೀಸ್ ಕಾಯಿದೆ ಕಲಂ 87 ರ ಅಡಿಯಲ್ಲಿ ತಪ್ಪಿತಸ್ಥರೆಂದು ಶಿಕ್ಷಿಸಲಾಗಿದೆ.

ಆರೋಪಿತರು ತಲಾ 200/- ರೂಪಾಯಿಗಳ ದಂಡವನ್ನು ಪಾವತಿಸುವಂತೆ ಆದೇಶಿಸಲಾಗಿದೆ. ದಂಡವನ್ನು ಪಾವತಿಸದಿದ್ದಲ್ಲಿ 10 ದಿವಸಗಳ ಸಾದಾ ಕಾರಾಗೃಹ ವಾಸದ ಶಿಕ್ಷೆಯನ್ನು ಅನುಭವಿಸುವಂತೆ ಆದೇಶಿಸಲಾಗಿದೆ.

**ಸ್ವತ್ತು ಪಟ್ಟಿ ಸಂಖ್ಯೆ 108/2026 ರಲ್ಲಿ ವಶಪಡಿಸಿಕೊಂಡಿರುವ 1 ರಿಂದ 3 ನೇ ಸ್ವತ್ತುಗಳು**

KAKD410005882026



**CC No. 280/2026**

1) ರೂಪಾಯಿ 9550/- ನಗದು ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಿದೆ.

2) 52 ಇಸ್ಪೀಟ್ ಹಾಳೆಗಳು ಮೌಲ್ಯ ರಹಿತವಾಗಿರುವುದರಿಂದ ಅವುಗಳನ್ನು ನಾಶಪಡಿಸಲು ಆದೇಶಿಸಿದೆ.

3) ಸಿಮೆಂಟ್ ಮತ್ತು ತಿಳಿ ಕಾಫಿ ಬಣ್ಣದ ಬೆಡ್ ಶೀಟ್ ಮೌಲ್ಯ ರಹಿತವಾಗಿರುವುದರಿಂದ ಅದನ್ನು ನಾಶಪಡಿಸಲು ಆದೇಶಿಸಿದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಸೋಮವಾರಪೇಟೆ.